ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

<u>ಪಿ.ಸಿ.ಆರ್. ನಂ.**221/2025.** </u>ಪಿ.ಡಬ್ಲ್ಯು:**1**

ದಿನಾಂಕ **14-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

<u>ಫಿರ್ಯಾದುದಾರ ಸ್ವ ಇಚ್ಛಾ ಹೇಳಿಕೆ:-</u>

ನಾನು ನನ್ನ ಮುಖ್ಯ ಸ್ವ ಇಚ್ಛಾ ಹೇಳಿಕೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ನಾನು ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಕಡೂರಿನ ICICI ಬ್ಯಾಂಕಿನ ಚೆಕ್ ನಂ.000843, ದಿ:12.06.2025, ರೂ.3,50,000/- ಮೌಲ್ಯದ ಚೆಕ್ಕನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-1 ಎಂದು, ಚೆಕ್ಕಿನಲ್ಲಿ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿ:16.06.2025 ರಂದು ಮತಿಘಟ್ಟ ಶಾಖೆಯ ಬರೋಡಾ ಬ್ಯಾಂಕ್ ರವರು ನೀಡಿರುವ ಹಿಂಬರಹವನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-2 ಎಂದು ಗುರುತಿಸಲಾಯಿತು.

ದಿನಾಂಕ: 09.07.2025 ರಂದು ನಾನು ವಕೀಲರ ಮೂಲಕ ಆರೋಪಿಗೆ ನೀಡಿರುವ ತಿಳುವಳಿಕೆ ಪತ್ರದ ಕಚೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-3 ಎಂದು ಗುರುತಿಸಲಾಯಿತು.

ನಿಪಿ-3 ರ ನೋಟೀಸು ಕಳುಹಿಸಿದ ಬಾಬ್ತು ಅಂಚೆ ರಶೀದಿಯನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-4 ಎಂದು ಗುರುತಿಸಲಾಯಿತು.

ನೋಟೀಸ್ ಜಾರಿಯಾಗದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-5 ಎಂದು, ಅದರ ಒಳಗೆ ಇರುವ ನೋಟೀಸಿನ ಪ್ರತಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ:ದ:ನ್ಯಾ:ದಂ.,ರವರು, ಕಡೂರು.